# ನಗರಸಭಾ ಕಾರ್ಯಾಲಯ ಶಿವಮೊಗ್ಗ.

ಕ್ರಮಾಂಕ : ಕಾವಿ: ಡಿ.ಎಂ.ಸಿಆರ್ :  /2009-10                                ದಿನಾಂಕ : 26-08-2009

## ಟೆಂಡರ್ ಪ್ರಕಟಣೆ

2008-09 ಸಾಲಿನ ಎಸ್.ಎಫ್.ಸಿ. ಅನುದಾನ ಯೋಜನೆಯಡಿಯಲ್ಲಿ ನಗರಸಭಾ ವ್ಯಾಪ್ತಿಯಲ್ಲಿ ಬರುವ ಈ ಕೆಳಕಂಡ ಕಾಮಗಾರಿಗಳನ್ನು ನಿರ್ವಹಿಸಲು ಲೋಕೋಪಯೋಗಿ ಇಲಾಖೆ ಶಿವಮೊಗ್ಗ ವೃತ್ತದಲ್ಲಿ ಪ್ರಸಕ್ತ ಬ್ಲಾಕ್ ಅವಧಿಗೆ & ನಗರಸಭೆಯಲ್ಲಿ ನೊಂದಾಯಿತ 3ನೇ & ಮೇಲ್ಪಟ್ಟು ದರ್ಜೆಯ ಅರ್ಹ ಗುತ್ತಿಗೆದಾರರಿಂದ ಮೊಹರು ಮಾಡಿದ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ವಿವರಗಳು ಈ ಕೆಳಕಂಡಂತಿರುತ್ತವೆ.

| ಕ್ರ ಸಂ | ವಾರ್ಡ್ ಸಂಖ್ಯೆ | ಕಾಮಗಾರಿಯ ವಿವರ | ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ) | ಇ.ಎಂ.ಡಿ (ರೂ.ಲಕ್ಷಗಳಲ್ಲಿ) | ಫಾರಂ ಶುಲ್ಕ (ತೆರಿಗೆ ಸೇರಿ) |
|---|---|---|---|---|---|
| 1 | 1 | ನಗರಸಭೆಯ ಹಾಲಿ ಚಿತಾಗಾರದಲ್ಲಿ ಉದ್ಯಾನವನ, ರಕ್ಷಣಾ ಗೋಡೆ ಹಾಗೂ ಇತರೇ ನಾಗರೀಕ ಸೌಲಭ್ಯ ಒದಗಿಸುವುದು | 10.00 | 0.25 | 1000 |
| 2 | 2 | ನಗರಸಭೆಯ ಅನುಪಿನ ಕಟ್ಟೆಯ ಘನತ್ಯಾಜ್ಯ ಸಂಸ್ಕರಣಾ ಘಟಕಕ್ಕೆ ಸಂಪರ್ಕ ರಸ್ತೆ ನಿರ್ಮಾಣ | 20.00 | 0.5 | 2000 |

1 ಟೆಂಡರ್ ಫಾರಂಗಳಿಗೆ ನಗರಸಭೆ ರಶೀದಿಯೊಂದಿಗೆ ಅರ್ಜಿಸಲ್ಲಿಸುವ ಹಾಗೂ ನಗರಸಭೆಯಿಂದ ಖಾಲಿ ಟೆಂಡರ್ ಪಾರಂಗಳನ್ನು ನೀಡುವ ದಿನಾಂಕ: 31-08-2009 ರಿಂದ 25-09-2009ರವರೆಗೆ. (ಸಂಜೆ 5ರ ವರೆಗೆ)

2 ಭರ್ತಿ ಮಾಡಿದ ಟೆಂಡರ್ ಫಾರಂಗಳನ್ನು (ಡಬ್ಬಿಗೆ) ಸ್ವೀಕರಿಸುವ ದಿನಾಂಕ 26-09-2009. (ಸಂಜೆ 4ರ ವರೆಗೆ)

3 ಟೆಂಡರ್ ತೆರೆಯುವ ದಿನಾಂಕ 26-09-2009. (ಸಂಜೆ 5.30ಕ್ಕೆ)

## ಷರತ್ತುಗಳು

1 ಯಾವುದೇ ಅಥವಾ ಎಲ್ಲಾ ಟೆಂಡರ್‌ಗಳನ್ನು ಯಾವುದೇ ಕಾರಣಗಳನ್ನು ಕೊಡದೇ ಅಂಗೀಕರಿಸುವ, ನಿರಾಕರಿಸುವ ಅಥವಾ ರದ್ದುಪಡಿಸುವ ಅಧಿಕಾರ ಆಯುಕ್ತರು ನಗರಸಭೆ ಶಿವಮೊಗ್ಗ ಇವರು ಹೊಂದಿರುತ್ತಾರೆ

2 ಟೆಂಡರ್‌ಸಲ್ಲಿಸುವಾಗ ಎಸ್.ಆರ್ ದರಕ್ಕಿಂತ ಕಡಿಮೆದರಸಲ್ಲಿಸದಲ್ಲಿ ವ್ಯತ್ಯಾಸದ ಹಣವನ್ನು ಡಿ.ಡಿ ಯೊಂದಿಗೆ ಟೆಂಡರ್‌ಜೊತೆಗೆ ಸಲ್ಲಿಸತಕ್ಕದ್ದು. ತಪ್ಪಿದಲ್ಲಿ ಟೆಂಡರನ್ನು ತಿರಸ್ಕರಿಸಲಾಗುವುದು.

3 ಮುಂಗಡ ಠೇವಣಿ ಹಣವನ್ನು ಆಯುಕ್ತರು ನಗರಸಭೆ ಶಿವಮೊಗ್ಗ ಇವರ ಹೆಸರಿಗೆ ಅನುಸೂಚಿತ ಬ್ಯಾಂಕ್‌ಗಳ ಡಿ.ಡಿ ಮುಖಾಂತರ ಪಡೆದು ಲಗತ್ತಿಸತಕ್ಕದ್ದು

4 ಅರ್ಜಿದಾರರು ತಮ್ಮ ಗುತ್ತಿಗೆ ನೋಂದಾವಣಿ ಪತ್ರದ ಪ್ರತಿ ಮತ್ತು ಇ.ಎಂ.ಡಿಯೊಂದಿಗೆ ಅರ್ಜಿ ಸಲ್ಲಿಸುವುದು.

5 ಮೇಲಿನ ಕಾಮಗಾರಿಗೆ ಬೇಕಾಗುವ ಎಲ್ಲಾ ಸಾಮಾಗ್ರಿಗಳನ್ನು ಗುತ್ತಿಗರದಾರರೇ ಖರೀದಿಸಿ ತರಬೇಕಾಗುತ್ತದೆ. ಹಾಗೂ ಸಾಮಾಗ್ರಿಗಳ ಗುಣಮಟ್ಟದ ಖಾತ್ರಿಯ ಪ್ರಮಾಣ ಪತ್ರವನ್ನು ಸಂಬಂಧಪಟ್ಟ ಇಲಾಖೆಯಿಂದ ಕಡ್ಡಾಯವಾಗಿ ತರಬೇಕಾಗುತ್ತದೆ.

6 ಕೆಲಸಕ್ಕೆ ಅವಶ್ಯವಾಗಿ ಬೇಕಾದ ಯಂತ್ರೋಪಕರಣ & ಸಾಮಾಗ್ರಿಗಳನ್ನು ಹೊಂದಿರಬೇಕು & ಈ ಹಿಂದೆ ಯಾವುದೇ ಕೆಲಸಗಳನ್ನು ಪೂರ್ಣಗೊಳಿಸದೇ ಮಧ್ಯದಲ್ಲಿ ತೊರೆದಿರಬಾರದು.

7 ಮಾನ್ಯ ನಿರ್ದೇಶಕರು ಪೌರಾಡಳಿತ. ನಿರ್ದೇಶನಾಲಯ ಬೆಂಗಳೂರು ಇವರ ಆದೇಶನ್ವಯ ಪೂರ್ಣಗೊಂಡ ಕಾಮಗಾರಿಯ ದಿನಾಂಕದಿಂದ ಮುಂದುವರೆದಂತೆ ಕಾಮಗಾರಿಯ ನಿರ್ವಹಣೆಯನ್ನು ಎರಡು ವರ್ಷದ ಅವಧಿಗೆ ಗುತ್ತಿಗೆದಾರರು ಕಾಯ್ದುಕೊಳ್ಳುವ ಜವಾಬ್ದಾರಿ ಇರುತ್ತದೆ. ನಂತರ ಭದ್ರತಾ ಠೇವಣಿ ಹಣವನ್ನು ನಂತರ ಹಿಂದಿರುಗಿಸಲಾಗುವುದು.

೮ ಗುತ್ತಿಗೆದಾರರು ಕಾಮಗಾರಿಯನ್ನು ಎಲ್ಲಾ ರೀತಿಯಿಂದ ಪೂರ್ಣಗೊಳಿಸಿ ಸದರಿ ಕಾಮಗಾರಿಯನ್ನು ತೃಪ್ತಿಕರವಾಗಿ ನಿರ್ವಹಿಸಿದ ಬಗ್ಗೆ ಪರೀಕ್ಷಿಸಿದ ವರದಿ ಬಂದ ನಂತರವೇ ಕಾಮಗಾರಿಯನ್ನು ಹಸ್ತಾಂತರಿಸಿಕೊಳ್ಳಲಾಗುವುದು

೯ ಕಾರ್ಯದೇಶ ಪಡೆಯುವ ಮುನ್ನ ಬಿಡ್ ಮೊತ್ತದ ಮೇಲೆ ಶೇ5% ರಷ್ಟು ಎಫ್.ಎಸ್.ಡಿ.ಹಣವನ್ನು ಡಿ.ಡಿ.ಮುಖಾಂತರ ಅಥವಾ ಬ್ಯಾಂಕ್ ಗ್ಯಾರಂಟಿಯನ್ನು ರಾಷ್ಟ್ರೀಕೃತ ಬ್ಯಾಂಕ್‌ಗಳಿಂದ ಪಡೆದು ಸಲ್ಲಿಸತಕ್ಕದ್ದು. (ಕರ್ನಾಟಕ ಟೆಂಡರ್ ಸ್ಟ್ಯಾಂಡರ್ಡ್ ಡಾಕ್ಯೂಮೆಂಟ್ KW-1 ರಲ್ಲಿ ತಿಳಿಸಿರುವ ಷರತ್ತಿಗೊಳಪಟ್ಟಿರುತ್ತದೆ.)

10 ಹೆಚ್ಚಿನ ಮಾಹಿತಿ ಬೇಕಿದ್ದಲ್ಲಿ ಈ ಕಛೇರಿಯ ಕಾಮಗಾರಿ ವಿಭಾಗದಲ್ಲಿ ಪಡೆಯಬಹುದಾಗಿದೆ.

(ಶ್ರೀ.ಎನ್.ಜೆ.ರಾಜ ಶೇಖರ್)
ಅಧ್ಯಕ್ಷರು
ನಗರಸಭೆ, ಶಿವಮೊಗ್ಗ

(ಶ್ರೀ.ಬಿ.ಜಯಣ್ಣ)
ಪೌರಾಯುಕ್ತರು
ನಗರಸಭೆ, ಶಿವಮೊಗ್ಗ